**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಖಾನಾಪೂರ.**

**:: ಉಪಸ್ಥಿತರು ::**

**ಶ್ರೀ. ದಾನಪ್ಪ.,**

**ಬಿ.ಎ.,ಎಲ್.ಎಲ್.ಬಿ.,(Spl)**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಖಾನಾಪೂರ.**

**ಸಿ.ಸಿ.ನಂ: 36/2019**

**ಪಿರ್ಯಾದಿದಾರ:** ಅಬಕಾರಿ ಉಪ ನಿರೀಕ್ಷಕರು,
(ಖಾನಾಪೂರ ವಲಯ )

**ವಿರುದ್ಧ**

**ಆರೋಪಿತರು :**

1. **ಜೋತಿಬಾ ನಿಂಗಪ್ಪಾ ಬಡಾಂಗೆ**
   ವಯಸ್ಸುಃ 27 ವರ್ಷ, ಉಃ ಕೂಲಿ ಕೆಲಸ
   ಸಾಃ #169 ನಾಗನಾಥ ಗಲ್ಲಿ ಬೇಕ್ಕಿನಕೇರಿ ಬೆಳಗಾವಿ.

2. **ನಾಗೇಂದ್ರ ನಾಮದೇವ ಪಾಟೀಲ**
   ವಯಸ್ಸುಃ 25 ವರ್ಷ, ಉಃ ಕೂಲಿ ಕೆಲಸ
   ಸಾಃ #66 ಗೌಳಿಗಲ್ಲಿ ಬೇಕ್ಕಿನಕೇರಿ ಬೆಳಗಾವಿ.

**ನಾನು ಶ್ರೀ ದಾನಪ್ಪ., ಬಿ.ಎ, ಎಲ್. ಎಲ್ ಬಿ.,(Spl) ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಖಾನಾಪೂರ ನಿಮ್ಮ ಮೇಲೆ ಈ ಕೆಳಗಿನಂತೆ ಆಪಾದಿಸುತ್ತೇನೆಃ-**

**ದೋಷಾರೋಪಣೆ**

ದಿನಾಂಕ: 23-04-2018ರಂದು ಸಮಯ ರಾತ್ರಿ 11:00 ಗಂಟೆಯ ಸುಮಾರಿಗೆ ಈ ನ್ಯಾಯಾಲಯ ವ್ಯಾಪ್ತಿಯಲ್ಲಿ ಬರುವ ಅಬಕಾರಿ ನಿರೀಕ್ಷಕರ ಕಛೇರಿ ಖಾನಾಪೂರ ವಲಯ ಸರಹದ್ದಿನ ಖಾನಾಪೂರ ತಾಲ್ಲೂಕಿನ ಕಣಕುಂಬಿ-ಜಾಂಬೋಟಿ ರಸ್ತೆಯ ಮಧ್ಯದಲ್ಲಿರುವ ಚಿಕಲೆ ಕ್ರಾಸ್ ಹತ್ತಿರ ಅಬಕಾರಿ ನಿರೀಕ್ಷಕರು, ಖಾನಾಪೂರ ವಲಯರವರು ಪಂಚಜನರೊಂದಿಗೆ ಕೂಡಿಕೊಂಡು ಕರ್ನಾಟಕ ರಾಜ್ಯ ವಿಧಾನ ಸಭಾ 2018ರ ಸಾರ್ವತ್ರಿಕ ಚುನಾವಣೆ ನಿಮಿತ್ಯ ವಾಹನಗಳನ್ನು ತಪಾಸಣೆ ನಡೆಸುತ್ತಿದ್ದಾಗ , 1 ಮತ್ತು 2 ನೇ ಆರೋಪಿತರಾದ ನೀವು ನಿಮ್ಮ ಸ್ವಂತ ಫಾಯ್ದೆಗೋಸ್ಕರ, ಯಾವುದೇ ಪರವಾನಿಗೆ ಇಲ್ಲದೇ, 1 ನೇ ಆರೋಪಿತನಿಗೆ ಸೇರಿದ ಹಿರೋ ಎಚ್.ಎಫ್.

ಡಿಲಕ್ಸ್ ದ್ವಿಚಕ್ರವಾಹನದ ನೋಂದಣಿ ಸಂ. ಕೆಎ-22 ಇಪಿ-0921 ನೇದ್ದರ ಮೇಲೆ ಒಂದು ಪ್ಲಾಸ್ಟಿಕ್ ಚೀಲದಲ್ಲಿ 750 ಎಂ. ಎಲ್ ಅಳತೆಯ 24 ರಾಯಲ್ ಸ್ಟ್ಯಾಗ್ ವಿಸ್ಕಿಯ ಬಾಟಲಿಗಳನ್ನು ತಾಬಾ ಇಟ್ಟುಕೊಂಡು ಸಾಗಾಣಿಕೆ ಮಾಡುತ್ತಿದ್ದಾಗ ಸಿಕ್ಕಿದ್ದು, ಆ ಮೂಲಕ ಅಪರಾಧ ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ.32ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಈ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಲ್ಲಿ ಆರೋಪಿತನಾದ ನೀನು, ಅಕ್ರಮವಾಗಿ ಯಾವುದೇ ಅಧಿಕೃತ ಅಧಿಕಾರಿಗಳಿಂದ ಅನುಮತಿ ಇಲ್ಲದೆ, ನಿಮ್ಮ ಸ್ವಂತ ಪಾಯ್ದೆಗೋಸ್ಕರ, 1 ಮತ್ತು 2 ನೇ ಆರೋಪಿತರಾದ ನೀವು ಗೋವಾ ರಾಜ್ಯದಲ್ಲಿ ಮಾತ್ರ ಮಾರಾಟಕ್ಕಿರುವ 750 ಎಂ. ಎಲ್ ಅಳತೆಯ 24 ರಾಯಲ್ ಸ್ಟ್ಯಾಗ್ ವಿಸ್ಕಿಯ ಬಾಟಲಿಗಳನ್ನು ತಾಬಾ ಇಟ್ಟುಕೊಂಡು ಸಾಗಾಣಿಕೆ ಮಾಡುತ್ತಿದ್ದಾಗ ಸಿಕ್ಕಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಸದರಿ ಮೇಲ್ಕಂಡ ದೋಷಾರೋಪಣೆಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತವೆ ಮತ್ತು ಸದರಿ ದೋಷಾರೋಣೆಗಳಿಗಾಗಿ ನಿಮ್ಮನ್ನು ವಿಚಾರಣೆಗೆ ಒಳಪಡಿಸಲಾಗುವುದು.

**(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ/ತರಿಗೆ ಕನ್ನಡ/ ಮರಾಠಿ/ ಹಿಂದಿ ಭಾಷೆಯಲ್ಲಿ ಓದಿ ಹೇಳಿ ನಂತರ ಆರೋಪಿ/ಗಳು ನೀಡಿದ ಉತ್ತರವನ್ನು ಯತಾವತ್ತಾಗಿ ಬರೆದುಕೊಂಡು ಸರಿಯಾಗಿದೆ ಎಂದು ದೃಢಿಕರಿಸಿದೆ.)**

28/6/16

**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ,**
**ಖಾನಾಪೂರ.**

**ಸ್ಥಳ: ಖಾನಾಪೂರ**
**ದಿನಾಂಕ:** 28/6/16

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ . ದಂಡಾಧಿಕಾರಿಗಳು ಖಾನಾಪೂರ . ಸಾ||ಖಾನಾಪೂರ.**

**-/ಭಾ.ದಂ.ಪ್ರ.ಸಂ. ಕಲಂ 240(2)/ ಭಾ. ನಾ. ಸು. ಸಂ. ಯಾ ಕಲಂ 263 ರ ಅಡಿ ಆರೋಪಿತರ ಹೇಳಿಕೆ/-**

ಪ್ರಶ್ನೆ.ಸಂ.1 : ಈಗ ಓದಿ ಹೇಳಿದ ಆರೋಪಗಳನ್ನು ನಿಮಗೆ ತಿಳಿದಿರುವ ಭಾಷೆಯಲ್ಲಿ ವಿವರಿಸಿರುವುದನ್ನು ಕೇಳಿ ತಿಳಿದುಕೊಂಡಿರುವಿರಾ?

ಉತ್ತರ : ಆರೋಪಿ: 1 ಅರ್ಥವಾಗಿದೆ

ಆರೋಪಿ: 2 ಅರ್ಥವಾಗಿದೆ

ಪ್ರಶ್ನೆ.ಸಂ.2: ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬಯಸುತ್ತೀರಾ?

ಉತ್ತರ : ಆರೋಪಿ:1 ವಿಚಾರಣೆಯಾಗಬೇಕು

ಆರೋಪಿ: 2 ವಿಚಾರಣೆಯಾಗಬೇಕು

(ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಭಾಷೇಯಲ್ಲಿ ಓದಿ ಹೇಳಿ, ವಿವರಿಸಿ ನಂತರ ಅವರ ಹೇಳಿಕೆ ಮತ್ತು ಸಹಿಯನ್ನು ನನ್ನ ಸಮಕ್ಷಮ ಪಡೆಯಲಾಗಿದೆ ಎಂದು ದೃಢೀಕರಿಸುತ್ತೇನೆ)

**ದಿನಾಂಕ :** 28/6/26

**ಸ್ಥಳಃ ಖಾನಾಪೂರ.**

**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ .ದಂ.ಗಳ ನ್ಯಾಯಾಲಯ,**
**ಖಾನಾಪೂರ.**